ಮೂಲ ದಾವಾ ಸಂಖ್ಯೆ 115/2016 ಪಿ ಡಬ್ಲ್ಯೂ 1 ಸಿದ್ದಪ್ಪ ಬಿನ್ ಕೊಟ್ರಪ್ಪ

(ದಿನಾಂಕ 20-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

<u>ಮುಂದುವರೆದ ಪಾಟೀ ಸವಾಲು 1ನೇ ಪ್ರತಿವಾದಿ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃ-</u>

ನನ್ನ ಮಗನಾದ ಎಸ್ ಎಸ್ ರಾಜಶೇಖರ್ ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆಯನ್ನು ದಾಖಲಿಸಿರುತ್ತಾರೆಂದರೆ ಸರಿ. ಪ್ರತಿವಾದಿಯು ಕೂಡಾ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ 2 ಮತ್ತು 3 ನೇ ಪ್ರತಿವಾದಿ ಹಾಗೂ ಇತರರ ವಿರುದ್ಧ ರಿಟ್ ಅರ್ಜಿಯನ್ನು ಸಲ್ಲಿಸಿದ್ದರೆಂದರೆ ಸರಿ. ನನ್ನ ಮಗನು ಹಾಕಿದ ರಿಟ್ ಅರ್ಜಿಯು ಬೆಳೆ ಬೆಳೆಯಲು ಕೊಟ್ಟಂತಹ ಪರವಾನಿಗೆಯಾಗಿದ್ದು ಫಿಶ್ ಪಾಂಡನ್ನು ನಡೆಸಲು ಕೊಟ್ಟಂತಹ ಪರವಾನಿಗೆಯಾಗಿರುವುದಿಲ್ಲವೆಂದು ತೀರ್ಮಾನವಾಗಿರುತ್ತದೆ. ನಾನು ಸದರಿ ದಾಖಲೆಯನ್ನು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರತಿವಾದಿಯ ವಿರುದ್ಧ ಯಾವುದೇ ಆದೇಶವಾಗಿರುವುದಿಲ್ಲ, ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯು ಕನಾನುನುಬದ್ಧವಾಗಿ ಅನುಮತಿಯನ್ನು ತೆಗೆದುಕೊಂಡು ಪೈಪ್ ಲೈನನ್ನು ಅಳವಡಿಸಿದ್ದು, ಅವರು ಯಾವುದೇ ಸಾರ್ವಜನಿಕರಿಗೆ ಹಾಗೂ ಜಾನುವಾರುಗಳಿಗೆ ತೊಂದರೆಯಾಗುವಂತಹ ಕೆಲಸವನ್ನು ಮಾಡಿರುವುದಿಲ್ಲವೆಂದರೆ ಸರಿಯಲ್ಲ. 1 ರಿಂದ 10 ನೇ ವಾದಿಗಳು ಒಂದೇ ಕುಟಂಬದವರಾಗಿದ್ದು ಪ್ರತಿವಾದಿಗಳ ವಿರುದ್ಧ ದ್ವೇಷದಿಂದ ಸದರಿ ಪ್ರತಿನಿಧಿಯ ದಾವೆಯನ್ನು ಸಲ್ಲಿಸಿರುತ್ತೇವೆಂದರೆ ಸರಿಯಲ್ಲ.

ನಾನು ಮತ್ತು 3 ನೇ ವಾದಿಯು ಯಾವುದೇ ಪರವಾನಿಗೆಯನ್ನು ತೆಗೆದುಕೊಳ್ಳದೇ ತುಂಗಭದ್ರಾ ನದಿಯ ನೀರನ್ನು ಉಪಯೋಗಿಸುತ್ತಿದ್ದೇವೆಂದರೆ ಸರಿಯಲ್ಲ.

(ಪ್ರತಿವಾದಿ 1 ರವರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದರು ಅನುಮತಿಸಲಾಯಿತು).

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ